3

# ದೇವರ ಸರ್ವಶಕ್ತಿ:

## ನಮ್ಮ ದೇವರು "ಕ್ಷೀಣಿಸುವವನು" ಅಲ್ಲ

ದೇವರ ಬಗೆಗಿನ ಯಾವುದೇ ಚರ್ಚೆಯು ಅನೇಕ ಕಾರಣಗಳಿಂದ ಆತಂಕಗೊಳ್ಳುತ್ತದೆ. ಹೀಗಿದ್ದರೂ ಅತೀ ಹೆಚ್ಚು ಮಹತ್ವವಾದದ್ದು ನಮ್ಮ ತಿಳುವಳಿಕೆಯ ಕೊರತೆಯಲ್ಲಿರುತ್ತದೆ. ಯೋಬನಂತೆ, ನಾವು ದೇವರ ಅಸ್ತಿತ್ವದೊಂದಿಗೆ ಎದುರಿಸಲ್ಪಡುವಾಗ, ಅವನು ಹೇಳಿದಂತೆ ಉತ್ತರಕೊಡಲು ನಾವು ನಡಿಸಲ್ಪಡುತ್ತೇವೆ. "ನಾನು ತಿಳಿಯದ ಸಂಗತಿಗಳನ್ನೂ ನನಗೆ ಗೊತ್ತಿಲ್ಲದೆ ಬುದ್ಧಿಗೆ ಮೀರಿ ಇರುವ ಅದ್ಭುತಗಳನ್ನೂ ಕುರಿತು ಮಾತಾಡಿದ್ದೇನೆ" (ಯೋಬ 42:3ಬಿ).

ದೇವರ ಬಗ್ಗೆ ಚರ್ಚಿಸುವಲ್ಲಿ ಇನ್ನೊಂದು ಕಷ್ಟವು ನಾವು ಒಂದರ ನಂತರ ಒಂದನ್ನು ಚರ್ಚಿಸತಕ್ಕದ್ದಕ್ಕೆ ಆತನು ಒಂದೇ ಸಮಯದಲ್ಲಿ ಇರುವಂಥದ್ದು. ದೇವರು ಒಂದೇ ಸಮಯದಲ್ಲಿ ಸರ್ವವ್ಯಾಪಿಯೂ, ಸರ್ವಜ್ಞನೂ ಸರ್ವಶಕ್ತನೂ ಆಗಿದ್ದಾನೆಣಿ ಆದರೆ ಈ ಲಕ್ಷಣಗಳನ್ನು ಒಂದರ ನಂತರ ಒಂದನ್ನು ನಾವು ಚರ್ಚಿಸತಕ್ಕದ್ದು. ನಾವು ಇದನ್ನು ಮಾಡುವಾಗ ದೇವರು ಏಕಕಾಲದಲ್ಲಿ ಇರುವನು, ತಿಳಿದಿರುವನು ಹಾಗೂ ನಿರಂತರ ವಾಗಿ ಕಾರ್ಯಮಾಡುವನು ಎಂಬದನ್ನು ನಮ್ಮ ಯೋಚನೆಗಳಲ್ಲಿಟ್ಟು ಕೊಳ್ಳತಕ್ಕದ್ದು. ಆತನ ಅಸ್ತಿತ್ವವು ಎಂದೂ ಅಂತ್ಯಗೊಳ್ಳುವದಿಲ್ಲ. ಆತನ ಜ್ಞಾನಕ್ಕೆ ಎಂದೂ ಕೊರತೆಯಿರುವದಿಲ್ಲ. ಆತನ ಬಲವು ಎಂದೂ ಕಡಿಮೆಯಾಗುವದಿಲ್ಲ.

ಹೆಚ್ಚು ಪೂರ್ಣವಾಗಿ ದೇವರನ್ನು ತಿಳಿದುಕೊಳ್ಳುವ ನಮ್ಮ ನಿರೀಕ್ಷೆಯು ಆತನನ್ನು ಹುಡುಕಿ ತೆಗೆಯುವ ನಮ್ಮ ಚತುರ ಸಾಮರ್ಥ್ಯದಲ್ಲಿ ಪೂರ್ಣವಾಗಿರುವದಿಲ್ಲ. ಆದರೆ ಆತನು ತಾನೇ ನಮಗೆ ಪ್ರಕಟಿಸುವ ಆತನ ಇಚ್ಛೆಯಲ್ಲಿರುತ್ತದೆ. ನಿಸರ್ಗದಲ್ಲಿ (ಆತನ ಸೃಷ್ಟಿಯಲ್ಲಿ), ಕ್ರಿಸ್ತನಲ್ಲಿ (ಆತನ ಕುಮಾರನಲ್ಲಿ), ಮತ್ತು ಪರಶುದ್ಧ ಬರಹಗಳಲ್ಲಿ (ಆತನ ವಾಕ್ಯದಲ್ಲಿ) ಆತನು ಅದನ್ನು ಮಾಡಿದ್ದಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಬೇಕು. ಸರ್ವಶಕ್ತ ದೇವರನ್ನು ಅರ್ಥಮಾಡಿಕೊಳ್ಳಲು ಈಗ ನಾವು ಆತನ ವಾಕ್ಯಕ್ಕೆ ಹೋಗೋಣ.

### ಹಳೇ ಒಡಂಬಡಿಕೆಯಲ್ಲಿ ಚಿತ್ರಿಸಲ್ಪಟ್ಟ ಆತನ ಶಕ್ತಿ

ದೇವರ ಸರ್ವ ಶಕ್ತಿಯು ಆತನ ಪರಾಕ್ರಮ ಕಾರ್ಯಗಳಲ್ಲಿ ಕಂಡುಬರುವಂತೆ ಹಳೇ ಒಡಂಬಡಿಕೆಯು ಒತ್ತಿ ಹೇಳುತ್ತದೆ. ಇದು ದೇವರ ತತ್ವಗಳನ್ನು ಇಲ್ಲವೇ ಸಂಕ್ಷೇಪ ತತ್ವಗಳನ್ನು ತೆಗೆದು ಹಾಕುವದಿಲ್ಲ. ಹಾಗಿದ್ದರೂ ಅಂಥ ತತ್ವಗಳು ಹಳೇ ಒಡಂಬಡಿಕೆಯಲ್ಲಿ ನಿಜವಾಗಿಯೂ ಅಪರೂಪ. ಆದರೆ ಹಳೇ ಒಡಂಬಡಿಕೆಯಲ್ಲಿ ಚರಿತ್ರೆಯನ್ನು ಬದಲಾಯಿಸುವ ದೇವರನ್ನು ಕಂಡುಕೊಳ್ಳುತ್ತೇವೆ. ಐಗುಪ್ತ ರಾಜ್ಯವು ಪ್ಲೇಗು ಗಳಿಂದ ಬಹಳವಾಗಿ ಬಾಧಿಸಲ್ಪಟ್ಟಿತು (ವಿಮೋಚನಕಾಂಡ 7-11). ಕೆಂಪು ಸಮುದ್ರ ಇಬ್ಭಾಗವಾಯಿತು. ಅದರಿಂದ ಇಸ್ರಾಯೇಲ್ಯರು ಐಗುಪ್ತರಿಂದ ತಪ್ಪಿಸಿಕೊಂಡರು. ಆದರೆ ಐಗುಪ್ತರ ಸೈನ್ಯವು ನಾಶಪಡಿಸಲ್ಪಟ್ಟಿತು (ವಿಮೋಚನಕಾಂಡ 14ಣಿ 15). ಸಿನಾಯಿ ಬೆಟ್ಟ ಕಂಪಿಸಿತು ಮತ್ತು ಹೊಗೆಯಿಂದ ಮುಚ್ಚಿಕೊಂಡಿತ್ತು, ದೇವರ ಪ್ರತ್ಯಕ್ಷತೆಗಳಿಂದ ಜನರು ಭಯಪಟ್ಟರು. ಒಡಂಬಡಿಕೆಯ ಮಂಜೂಷವನ್ನು ಹೊತ್ತುಕೊಂಡ

ಯಾಜಕರು ಹೊಳೆಯನ್ನು ದಾಟಲು ಯೊರ್ದನ್ ನದಿಯ ನೀರು ನಿಂತುಕೊಂಡಿತು (ಯೆಹೋಶುವ 3ಣಿ 4). "ಅರ್ಭಟಿಸಿರಿ! ಯೆಹೋವನು ನಿಮಗೆ ಈ ಪಟ್ಟಣವನ್ನು ಕೊಟ್ಟಿದ್ದಾನೆ" (ಯೆಹೋಶುವ 6:16ಬಿ) ಎಂದು ಜನರಿಗೆ ಯೆಹೋಶುವನು ಅಪ್ಪಣೆಯು ದೃಢಪಡಿಸಲ್ಪಟ್ಟಾಗ ಯೆರಿಕೋವಿನ ಕೋಟೆ ಗೋಡೆಗಳು ಇಸ್ರಾಯೇಲಿನ ಮುಂದೆ ಕೆಡೆಕೊಂಡು ಬಿದ್ದವು. ಅನೇಕ ಉದಾಹರಣೆಗಳನ್ನು ಕೂಡಿಸಬಹುದು, ಆದರೆ ಈ ಕೆಲವುಗಳು ದೈವಿಕ ಬಲವನ್ನು ಮುಂದುವರಿಸಲು ಸಾಕಷ್ಟಾಗುತ್ತವೆ.

ದೇವರ ಕಟಾಕ್ಷವನ್ನು ಒಳಗೊಂಡಿರುವ ದೇವರ ಶಕ್ತಿಯನ್ನು ದೇವರ ಜನರು ನೋಡಿದರು. ಅವರ ಚರಿತ್ರೆಯು ಅವರೊಂದಿಗೆ ದೇವರು ವ್ಯವಹರಿಸಿದ ಕಾರ್ಯಾಚರಣೆಯಾಗಿರುತ್ತದೆ. ಆದುದರಿಂದ ದೇವರ ಜೋಪಾನಯಲ್ಲಿ ಅವರ ವಿಶ್ವಾಸವು ಹಾಗೆ ಮಾಡಲಿಕ್ಕೆ ಆತನ ಬಲದಲ್ಲಿಯ ನಂಬಿಕೆಯಾಗಿತ್ತು. ದೇವರ ಶಕ್ತಿಯ ದೃಢತೆಯು, ದೈವಿಕ ನಡಿಸುವಿಕೆಯು ಅನೇಕ ಕೀರ್ತನೆಗಳಲ್ಲಿ ಪ್ರಮುಖ ಸ್ಥಾನವಹಿಸಿದೆ. ಉದಾಹರಣೆಯಾಗಿ ನಾವು ಹೀಗೆ ಓದುತ್ತೇವೆ: "ಮಹೋನ್ನತನ ಆಶ್ರಯದಲ್ಲಿ ವಾಸಿಸುವವನು ಸರ್ವಶಕ್ತನ ನೆರಳಿನಲ್ಲಿ ವಿಶ್ರಮಿಸುವನು. ನಾನು ಯೆಹೋವನಿಗೆ, 'ನೀನೇ ನನ್ನ ಆಶ್ರಯವೂ ನನ್ನ ಕೋಟೆಯೂ ನಾನು ಭರವಸೆಯಿಡುವ ನನ್ನ ದೇವರು ಎಂದು ಹೇಳುತ್ತೇನೆ' " (ಕೀರ್ತನೆ 91:1, 2).

ತಾವು ದೇವರನ್ನು ನಂಬಿದರೆ ಆತನು ನಿಶ್ಚಿತವಾಗಿ ತಮಗೆ ಒದಗಿಸುವಾತನೂ ಆಶ್ರಯದಾತನೂ ಆಗಿರುವನೆಂಬದನ್ನು ದೇವರ ಜನರು ನಂಬಿದ್ದರು. ಈ ದೃಢ ನಿಶ್ಚಯತೆ ದೇವರು ಒದಗಿಸುವನು ಮತ್ತು ತಮ್ಮನ್ನು ಎಲ್ಲಾ ಕೇಡುಗಳಿಂದ ವಿಮೋಚಿಸುವನು ಎಂಬ ಈ ನಂಬಿಕೆಯ ಮೇಲೆ ಅವಲಂಭಿಸಿದ್ದಷ್ಟೇ ಅಲ್ಲ, *ಆತನು ಹಾಗೆ ಮಾಡುವನು* ಎಂಬ ಅವರ ವಿಶ್ವಾಸದ ಮೇಲೆಯೂ ಅವಲಂಭಿಸಿತು!

## ಆತನ ಬಲವು ಆತನ ಹೆಸರಿನಲ್ಲಿ ಎಣಿಸಲ್ಪಟ್ಟಿದೆ

ಇಸ್ರಾಯೇಲ್ಯರಿಂದ ದೇವರಿಗೆ ಕೊಡಲ್ಪಟ್ಟಿರುವ ಅನೇಕ ಹೆಸರುಗಳು ಆತನ ಬಲದಲ್ಲಿರುವ ಅವರ ನಂಬಿಕೆಗೆ ಸಾಕ್ಷಿಕೊಡುತ್ತವೆ. ಕೀರ್ತನೆ 91ರಲ್ಲಿ ಮೂರು ಉದಾಹರಣೆಗಳನ್ನು ನೋಡುತ್ತೇವೆ. ಮೊದಲನೆಯದು "ಮಹೋನ್ನತನು." ಇದು *'elyon* ಎಂಬುದರ ಭಾಷಂತರ. ಎರಡನೆಯ ಪದ, *'El*, ಇದು ಮೂಲದಲ್ಲಿ ಕಾನಾನ್ಯರ ಮುಖ್ಯ ದೇವರಿಗಿದ್ದ ಕಾನಾನ್ಯ ಹೆಸರಾಗಿತ್ತು. ಅದರ ಅರ್ಥ "ಬಲಶಾಲಿ, ಶಕ್ತಿಯುಳ್ಳವನು"[1] ಎಂದಾಗಿತ್ತು. ವಿಗ್ರಹಾರಾಧನೆಯಿಂದ ಇದು ಶುದ್ಧೀಕರಿಸಲ್ಪಟ್ಟಾಗ *"'El"* ಎಂಬ ಹೆಸರು ಇಬ್ರಿಯರ ನಿಜವಾದ ಹಾಗೂ ಜೀವಿಸುವ ದೇವರಿಗೆ ಅನ್ವಯಿಸಲ್ಪಟ್ಟಿತು. ಕೀರ್ತನೆ 91ರಲ್ಲಿ ಹೆಸರು ಸರ್ವ ಶ್ರೇಷ್ಠತೆಯಲ್ಲಿದೆ: *'Elyon* ಇದು "ಮಹೋನ್ನತನು," ಅತ್ಯುನ್ನತವಾದ ಮಟ್ಟದ ಬಲದೊಂದಿಗಿರುವಾತನಿಗೆ ಸಮನಾಗಿದೆ. ಇಸ್ರಾಯೇಲ್ಯರು ದೇವರ ಬಲ ಹಾಗೂ ದೇವಾನುಗ್ರಹದ ಜೋಪಾಸನೆಯ ಬಗ್ಗೆ ನಿಕಟ ಸಂಬಂಧದಲ್ಲಿ ಉಳಿದರು. ಇದು ಇಸ್ರಾಯೇಲ್ಯ ತಂದೆ ತಾಯಿಗಳಿಂದ ತಮ್ಮ ಮಕ್ಕಳಿಗೆ ಕೊಟ್ಟ ಹೆಸರುಗಳಿಂದ ಸೂಚಿಸಲ್ಪಡುತ್ತದೆ. ಉದಾಹರಣೆ ಏಲಿ (*El*i), ಸಮುವೇಲ (Samu*el*), ಹಾಗೂ ಎಲೀಯ (*El*ijah). ಕೀರ್ತನೆ 91ರಲ್ಲಿಯ ಮೂರನೆಯ ಉದಾಹರಣೆಯಲ್ಲಿ ದೇವರ ಶಕ್ತಿಯಲ್ಲಿ ಇಸ್ರಾಯೇಲ್ಯರ ನಂಬಿಕೆಯನ್ನು ತೋರಿಸುವಂಥದ್ದು *Shaddai* ಎಂಬ ಹೆಸರು. ಇದು "ಸರ್ವಶಕ್ತ" ಎಂದು ಭಾಷಾಂತರಿಸಲ್ಪಟ್ಟಿದೆ.

## ಆತನ ಬಲವು ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ

ತನ್ನ ಚಿತ್ತದಂತೆ ಮಾಡಲು ಎಲ್ಲಾ ಶಕ್ತಿಯುಳ್ಳ ದೇವರನ್ನು ಹೊಸ ಒಡಂಬಡಿಕೆಯು ತೋರಿಸುತ್ತದೆ. ಈ ರೀತಿಯ ಹೇಳಿಕೆಗಳಿಂದ ಇದು ನೇರವಾಗಿ ಮುಂದೆ ತರಲ್ಪಟ್ಟಿದೆ: "... ಮನುಷ್ಯರಿಗೆ ಅಸಾಧ್ಯವಾದವುಗಳು ದೇವರಿಗೆ ಸಾಧ್ಯವಾಗಿವೆ" (ಲೂಕ 18:27) ಹಳೇ ಒಡಂಬಡಿಕೆಯಲ್ಲಿಯಂತೆ ಹೊಸ ಒಡಂಬಡಿಕೆಯೂ ದೇವರ ಬಲವು ಆತನು ತನ್ನ ಜನರ ಹಿತಕ್ಕಾಗಿ ಅದನ್ನು ಉಪಯೋಗಿಸುವನು ಎಂಬ ನಂಬಿಕೆಯೊಂದಿಗೆ ಕೂಡಿಸಲ್ಪಟ್ಟದ್ದನ್ನು ತೋರಿಸುತ್ತದೆ: "... ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?" (ರೋಮಾಪುರ 8:31). ಇದು ಕಾಪಾಡುವ, ಒದಗಿಸುವ ಮತ್ತು ತನ್ನ ಜನರನ್ನು ಬಿಡುಗಡೆ ಮಾಡುವ ದೇವರ ಸಮೀಪದ ಸಂಬಂಧದ ಬಗ್ಗೆ ಅವರಿಗಿರುವ ನಂಬಿಕೆಗೆ ಸಂಬಂಧಿಸಿದೆ (ಅಪೊಸ್ತಲರ ಕೃತ್ಯ 17:27ಬಿ). ಹಾಗೂ ಅವರ ಜೀವಿತಗಳ ಪ್ರತಿಯೊಂದು ವಿವರಣೆಯ ಬಗ್ಗೆ ಆತನು ಅರಿತು ಕೊಂಡಿರುವದರಲ್ಲಿ ಪ್ರಕಟವಾಗುತ್ತದೆ (ಮತ್ತಾಯ 10:29-31).

ಬೈಬಲಿನಲ್ಲಿ ನಮಗೆ ಪ್ರಕಟಿಸಲ್ಪಟ್ಟ ದೇವರು ದೂರದಲ್ಲಿರುವಾತನೂ, ಅಜ್ಞಾನಿಯೂ ಇಲ್ಲವೇ ಬಲಹೀನನೂ ಆಗಿರುವದಿಲ್ಲ. "ದೇವರ ಮಿತಿಯಿಲ್ಲದಿರುವಿಕೆ" ಎಂಬ ಪೂರ್ಣ ಭಾಗವು ಆತನು ಸರ್ವವ್ಯಾಪಿ, ಸರ್ವಜ್ಞಾನಿ ಮತ್ತು ಸರ್ವಶಕ್ತನಾಗಿದ್ದನು ಎಂಬುದನ್ನು ಒತ್ತಿ ಹೇಳುತ್ತದೆ. ಆತನು ದೈವವಾದದಲ್ಲಿ (Deism) ವಿವರಿಸಲ್ಪಟ್ಟ ದೇವರಾಗಿರುವದಿಲ್ಲ ಎಂಬುದು ಇದರ ಅರ್ಥ. ತನ್ನನ್ನು ಹಿಂದೆಗೆದುಕೊಂಡು, ವ್ಯಕ್ತಿ ಸಂಭವವಿಲ್ಲದ ರೀತಿ ಯಲ್ಲಿ ಜಗತ್ತು ಕಾರ್ಯಮಾಡುವುದನ್ನು ನೋಡಲು ಮಾತ್ರವೇ ಸೃಷ್ಟಿಯಲ್ಲಿ ಆತನು ತನ್ನ ಮಹಾಶಕ್ತಿಯನ್ನು ಉಪಯೋಗಿಸಲಿಲ್ಲ. ಆತನು ಅದ್ವೈತದಲ್ಲಿ (Pantheismನಲ್ಲಿ) ಹೇಳಲ್ಪಟ್ಟ ದೇವರೂ ಆಗಿರುವದಿಲ್ಲ. ದೇವರು ವಿಶ್ವದ ಮನಸ್ಸು ಇಲ್ಲವೇ ಪ್ರಾಣ ಆಗಿದ್ದಾನೆ ಹಾಗೂ ಇರುವ ಯಾವದಾದರೂ ದೇವರಾಗಿದೆ ಎಂಬ ವಿವರಣೆಗೂ ಆತನು ಹೊಂದಿಕೊಳ್ಳುವದಿಲ್ಲ. ಆತನು ನಿಶ್ಚಿತವಾಗಿಯೂ ಕಾಲಗತಿಯ ತತ್ವಜ್ಞಾನ, ದೈವಜ್ಞಾನದ ದೇವರಾಗಿರುವದಿಲ್ಲ. ಆತನು ವಿಶ್ವದ ಕಾಲಗತಿಯಲ್ಲಿ ಒಳಗೊಂಡಿರುವದಿಲ್ಲ. ಆತನು ತನ್ನ ಸೃಷ್ಟಿಯೊಳಗೆ ಕಾರ್ಯ ಮಾಡುವಂತೆ ಅವುಗಳಿಂದ ಬದಲಾಯಿಸಲ್ಪಡುವದಿಲ್ಲ.[2] ದೇವರು ಅತೀಂದ್ರಿಯನು ಮತ್ತು ಅಂತರ್ಗತನು ಎರಡೂ ಆಗಿದ್ದಾನೆ, ನಮ್ಮ ವೈಯಕ್ತಿಕ ಅಂತಿಮ ಪರಿಸ್ಥಿತಿಗಳನ್ನೊಳಗೊಂಡು ಎಲ್ಲವುಗಳನ್ನೂ ಅಧಿಕಾರದಲ್ಲಿಟ್ಟು ಕೊಂಡಿದ್ದಾನೆ.

ನಾವು ಸಂಪೂರ್ಣವಾಗಿ ದೇವರ ಮೇಲೆ ಅವಲಂಭಿಸಬಹುದು. ಜ್ಞಾನ ಪ್ರಕಾಶ ಹೊಂದಿದ ವಿಶ್ವಾಸದ ಮುಖಾಂತರ ಆತನ ಅತೀ ಬಲವಾದ ಹಾಗೂ ಎಲ್ಲದರ ಜೀವ ಬದಲಾಯಿಸುವಿಕೆಯ ಕಾರ್ಯವನ್ನು - ನಮ್ಮ ವಿಮೋಚನೆಯನ್ನು ಸ್ವೀಕರಿಸಲು ಇದು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ಎಲ್ಲಾ ಚರಿತ್ರೆಯ ಚರಿತ್ರೆಯನ್ನೇ ಬದಲಾಯಿಸಿದ ವಿಶಿಷ್ಟ ಕಾರ್ಯವು ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟದ್ದು. ಈ ಐತಿಹಾಸಿಕ ಸಮಯದಲ್ಲಿ, ಪರದೆಯು ತೆಗೆದು ಹಾಕಲ್ಪಟ್ಟಿದೆ ಹಾಗೂ ದೇವರೊಂದಿಗೆ ನೂತನ ಸಂಬಂಧವು ಮಾನವರಿಗೆ ಸಾಧ್ಯವಾಗಿ ಮಾಡಲ್ಪಟ್ಟಿದೆ. ಇತಿಹಾಸವನ್ನು ತಿರುಗಿಸಿ ದೇವರೊಂದಿಗೆ ನಮಗೆ ನಿತ್ಯವಾದ ಆನಂದದ ಸಂಬಂಧವನ್ನು ಸಾಧ್ಯ ಮಾಡುವುದು ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟದ್ದರಲ್ಲಿ ಹಾಗೂ ಆತನ ಪುನರುತ್ಥಾನದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಇದು ಕ್ರಿಸ್ತನ ಶುಭವಾರ್ತೆಯಾಗಿದೆ. ಹೀಗಿದ್ದರೂ ಅಂತಿಮ ಪ್ರತಿಫಲವು ಆತನ ಕಾರ್ಯವನ್ನು ಪೂರ್ತಿಗೊಳಿಸಲಿಕ್ಕೆ ದೇವರ ಬಲದ ಮೇಲೆ ಅವಲಂಭಿಸಿರುತ್ತದೆ.

# ಅನ್ವಯಗಳು

ದೇವರೊಂದಿಗೆ ಎಲ್ಲಾ ಸಂಗತಿಗಳು ಸಾಧ್ಯವಾಗಿವೆ ಎಂದು ಹಿಡಿದು ಕೊಂಡಿರುವ ನಮ್ಮ ವಿಶ್ವಾಸವು ನಮ್ಮ ಧರ್ಮವನ್ನು, ನಮ್ಮ ಜೀವಿತವನ್ನು ರೂಪಿಸುತ್ತದೆ. ಹಾಗಿದ್ದರೂ ನಮ್ಮ ವಿಶ್ವಾಸವು "ಕುರುಡು" ವಿಶ್ವಾಸವಾಗಿರುವುದಿಲ್ಲ. ದೇವರ ಬಲವನ್ನು ಕುರಿತಾಗಿರುವ ಕಠಿಣವಾದ ಪ್ರಶ್ನೆಗಳನ್ನು ನಾವು ಬದಿಗೆ ಸರಿಸಿಬಿಡಬಾರದು. ನಾವು ಅವುಗಳನ್ನು ಎದುರಿಸಬೇಕು. ಈ ಕೆಲವು ಪ್ರಶ್ನೆಗಳನ್ನು ಯೋಚಿಸೋಣ.

"ದೇವರ ಮಿತಿಯಿಲ್ಲದ ಬಲವು ಅಲುಗಿಸಲಾಗದ ವಸ್ತುವನ್ನು ಎದುರಿಸುವಾಗ ಏನು ಸಂಭವಿಸುತ್ತದೆ?" ಸ್ವಯಂ - ವಿರೋಧತ್ವವುಳ್ಳದ್ದಕ್ಕೆ ದೇವರ ಬಲವು ಅನ್ವಯವಾಗುವದಿಲ್ಲ. ಈ ಪ್ರಶ್ನೆಯಲ್ಲಿ "ಅಲುಗಿಸಾಲಾಗದ ವಸ್ತುವು" ಅಸ್ತಿತ್ವದಲ್ಲಿ ಇರುವದಿಲ್ಲ. ಪ್ರಶ್ನೆಯು ತಾತ್ವಿಕವಾದದ್ದು. ಅದು ವಾಸ್ತವಿಕತೆಯನ್ನು ತಪ್ಪಿಸಿಕೊಳ್ಳುತ್ತದೆ.

"ದೇವರು ಭೂತಕಾಲವನ್ನು ಬದಲಾಯಿಸಬಲ್ಲನೇ?" ಎಂಬಂಥ ಅದೇ ರೀತಿಯ ಪ್ರಶ್ನೆ. ಈ ಪೂರ್ವಕಲ್ಪಿತ ಪ್ರಶ್ನೆಯು ಆಗಲೇ ದಾಟಿ ಹೋದದ್ದನ್ನು ಸಂಬೋಧಿಸುತ್ತದೆ. ಸಮಯವನ್ನು ಕುರಿತಾಗಿದ್ದರೆ ಅದು ನಿತ್ಯತ್ವದಲ್ಲಿ ಅಸ್ತಿತ್ವವಿಲ್ಲದ್ದು ಆಗಿರುತ್ತದೆ. ಈ ಪ್ರಶ್ನೆಗೆ ಉತ್ತರವು ದುಷ್ಟ ಮೋಸಗಾರನಾಗಿ ಸತ್ತುಹೋದ ಯಾವನಿಗಾದರೂ ರಕ್ಷಣೆಯಾಗುವಂತೆ ಪ್ರಾರ್ಥಿಸುವದರಿಂದ ನಮ್ಮನ್ನು ದೂರವಿಡುತ್ತದೆ.

ಬೇರೆ ಪ್ರಶ್ನೆಗಳು ಕೆಲವು ಸಲ ಕೇಳಲ್ಪಡುತ್ತವೆ: "ದೇವರು ಸುಳ್ಳು ಹೇಳುವನೋ?"ಣಿ "ಆತನು ಪಾಪ ಮಾಡುವನೋ?"ಣಿ "ಆತನು ಸಾಯಬಹುದೋ?" ಉತ್ತರವು ಗುಡುಗುವ "ಇಲ್ಲ" ಎಂದಾಗಿರುತ್ತದೆ. ಈ ಕಾರ್ಯಗಳು ಆತನ ಸ್ವಭಾವಕ್ಕೆ ವಿರುದ್ಧವಾದವುಗಳಾಗಿವೆ. ಆತನು ಸಂಪೂರ್ಣವಾಗಿ ಸತ್ಯವುಳ್ಳವನಾಗಿರುವದರಿಂದ ಸುಳ್ಳು ಹೇಳುವದಿಲ್ಲ (ಯೆರೆಮೀಯ 10:10). ಆತನು ಪರಿಪೂರ್ಣವಾಗಿ ಶುದ್ಧನಾಗಿರುವದರಿಂದ ಆತನು ಪಾಪ ಮಾಡಲಾರನು (1 ಯೋಹಾನ 3:2, 3). ಆತನು ತಾನೇ ಜೀವವಾಗಿರುವದರಿಂದ ಆತನು ಸಾಯಲಾರನು (ಕೀರ್ತನೆ 36:9ಣಿ 133:3ಬಿ). ದೇವರು ತನ್ನ ಸ್ವಭಾವಕ್ಕೆ ವಿರುದ್ಧವಾದ ಯಾವುದನ್ನೂ ಮಾಡಲಾರನು. ದೇವರು ಚಂಚಲ ಚಿತ್ತನಾಗಿ ವರ್ತಿಸುವಷ್ಟು ಬಲಹೀನನಾಗಿರುವದಿಲ್ಲ ಎಂಬುದನ್ನು ತಿಳಿಯುವದಲ್ಲಿ ಕೃತಜ್ಞತೆ ಸಲ್ಲಿಸಲು ನಮಗೆ ಕಾರಣಗಳು ಇರುತ್ತವೆ, ಆತನು ನಂಬಿಗಸ್ತ ದೇವರಾಗಿದ್ದಾನೆ (ಧರ್ಮೋಪದೇಶಕಾಂಡ 7:9ಣಿ 1 ಕೊರಿಂಥ 10:13). ಆತನು ತನ್ನ ಸ್ವಂತ ಸ್ವಭಾವದಿಂದ ಕದಲದೇ ಇದ್ದಾನೆ (ಯಾಕೋಬ 1:17, 18).

ಅಂತಿಮವಾಗಿ, "ದೇವರು ಎಂದಾದರೂ ತನ್ನ ಬಲವನ್ನು ಮಿತಿಗೊಳಿಸುವನೋ?" ಈ ಪ್ರಶ್ನೆಯನ್ನು ಜಾಗರೂಕತೆಯಿಂದ ಉತ್ತರಿಸಬೇಕು. ಸರ್ವಶಕ್ತನಾಗಿರುವುದು ದೇವರ ಸ್ವಭಾವ ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟು ಕೊಳ್ಳತಕ್ಕದ್ದು. ಆದುದರಿಂದ ಆತನ ಬಲವನ್ನು ಹಾಗೆಯೇ ಆತನ ಸರ್ವಶಕ್ತ ಬಲವನ್ನು ಮಿತಿಗೊಳಿಸುವುದು ಆತನ ಸ್ವಭಾವಕ್ಕೆ ವಿರುದ್ಧವಾದದ್ದಾಗಿದೆ. ಹಾಗಿದ್ದರೂ ಆತನ ಅಪರಿಮಿತ ಚಿತ್ತವನ್ನು ನೆರವೇರಿಸಲು ಪರಿಪೂರ್ಣವಾಗಿ ರೂಪಿಸಿದ ಮಾರ್ಗಗಳಲ್ಲಿ ಆತನ ಮಿತಿಯಿಲ್ಲದ ಬಲವನ್ನು ಆತನು ತನ್ನ ಜ್ಞಾನದಲ್ಲಿ ಉಪಯೋಗಿಸಲು ಆಯ್ಕೆ ಮಾಡಿಕೊಳ್ಳಬಹುದು. ಪರಿಶುದ್ಧ ಬರಹದಲ್ಲಿ ಒಂದು ಅತೀ ಮಹತ್ವದ ವಾಕ್ಯಭಾಗದಲ್ಲಿ ಇದು ಇರುತ್ತದೆ. ನಾವು ಜ್ಞಾನ ಪ್ರಕಾಶ ಹೊಂದುವುದಕ್ಕಾಗಿ ಪೌಲನ ಪ್ರಾರ್ಥನೆಯು ನಮ್ಮೆಲ್ಲರ ಪ್ರಾರ್ಥನೆಯಾಗಿರಲಿ:

> ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ, ಆತನ ಕರೆಯ ನಿರೀಕ್ಷೆಯನ್ನೂ ಪರಿಶುದ್ಧರಲ್ಲಿ *ಆತನಿಗಿರುವ ಸ್ವಾಸ್ಥ್ಯದ ಮಹಿಮೆಯನ್ನೂ ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮದ ಬಲವು ಹಾಗೂ ಆತನ ಶಕ್ತಿಯು*

*ಅಪಾರವಾದ ಮಹತ್ವವು ಏನೆಂಬುದನ್ನೂ ನೀವು ತಿಳಿಯುವಂತೆ ದೇವರು ನಿಮಗೆ ಅನುಗ್ರಹಿಸಲಿ.* ಆತನ ಬಲಾತಿಶಯವು ಎಷ್ಟು ಮಹಾತ್ತಾದದ್ದು ಎಂಬುದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗಂದರೆ ಮರಣಹೊಂದಿದ್ದ ಕ್ರಿಸ್ತನನ್ನು ಆತನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಗಳ ಮೇಲೆಯೂ ಈ ಯುಗದಲ್ಲಿ ಮಾತ್ರವಲ್ಲದೆ ಬರಲಿಕ್ಕಿರುವ ಯುಗಗಳಲ್ಲಿಯೂ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿ ಕೊಂಡನು (ಎಫೆಸ 1:18-21).

ಟಿಪ್ಪಣಿಗಳು

[1]W. F. Albright, *Archaeology and the Religion of Israel* (Baltimore: Johns Hopkins, 1956), 72. [2]Carl F. H. Henry, *God, Revelation and Authority,* vol. 1, *God Who Speaks and Shows* (Waco, Tex.: Word Publishing Co., 1976). "Deism," "Pantheism," ಹಾಗೂ "Process Philosophy-Theology," ವಿಷಯವನ್ನು ಈ ಗ್ರಂಥದಲ್ಲಿ ಇಂಡೆಕ್ಸ್ ನೋಡಿರಿ ಇಲ್ಲವೇ ಯಾವುದೇ ಒಳ್ಳೇ ಮಟ್ಟದ ದೈವಜ್ಞಾನ ಶಾಸ್ತ್ರದ ರೆಫರನ್ಸ್ ವರ್ಕ್ ನೋಡಿರಿ.